## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1252 |
| ಸದಸ್ಯರ ಹೆಸರು | ಶ್ರೀ ಎಂ. ನಾಗರಾಜು (ವಿಧಾನ ಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 18.03.2025 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2018-19 ರಿಂದ 2021-22ರ ಸಾಲಿನವರೆಗೆ ರಾಜ್ಯದಲ್ಲಿ ಸಣ್ಣ ಖನಿಜ ರಿಯಾಯಿತಿ ನಿಯಮಗಳು 1994 ರಂತೆ ಅನುಮತಿ ಪಡೆದ ವಾರ್ಷಿಕ ಉತ್ಪಾದನಾ ಪ್ರಮಾಣ ದಲ್ಲಿ ಕನಿಷ್ಠ 50 ಪ್ರತಿಶತ ಮರಳು ಗುತ್ತಿಗೆಗಳಿಂದ ಸಾಧಿಸಲಾಗದೇ ರಾಯಲ್ಟಿ ಧನವನ್ನು (Royalty) ವಿಧಿಸದೇ ಇರುವುದರಿಂದ ರಾಯಲ್ಟಿ ಮತ್ತು ಎಪಿಪಿ ಸಂಗ್ರಹಣೆಯಲ್ಲಿ 493.90 ಕೋಟಿ ರೂ.ಗಳ ಕೊರತೆಯಾಗಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ➢ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರ ನಿಯಮ 31-W(1)(iv) ರಲ್ಲಿ, ಹರಾಜು ಮೂಲಕ ಗುತ್ತಿಗೆ ಪಡೆದ ಗುತ್ತಿಗೆದಾರನು ಪರಿಸರ ವಿಮೋಚನಾ ಪತ್ರದಲ್ಲಿ ನಿಗದಿ ಪಡಿಸಲಾದ ವಾರ್ಷಿಕ ಉತ್ಪಾದನೆಯ ಒಟ್ಟು ಪ್ರಮಾಣದಲ್ಲಿ ಕನಿಷ್ಠ ಶೇಕಡ 50 ರಷ್ಟು ಪ್ರಮಾಣದ ಮರಳನ್ನು ಉತ್ಪಾದನೆ ಮಾಡಿ ವಿಲೇವಾರಿ ಮಾಡಬೇಕಾಗಿರುತ್ತದೆ.<br>➢ ಒಂದು ವೇಳೆ ಗುತ್ತಿಗೆದಾರನು ಶೇಕಡ 50ರಷ್ಟು ಪ್ರಮಾಣದ ಮರಳನ್ನು ಉತ್ಪಾದನೆ ಮಾಡಲು ವಿಫಲನಾದಲ್ಲಿ ಅವನು ಶೇಕಡ 50ರಷ್ಟು ಮರಳಿನ ಪ್ರಮಾಣಕ್ಕೆ ಅನುಗುಣವಾಗಿ ರಾಜಧನ, ಹೆಚ್ಚುವರಿ ನಿಯತಕಾಲಿಕ ಮೊತ್ತ ಪಾವತಿಸ ಬೇಕಾಗಿರುತ್ತದೆ.<br>➢ ಮುಂದುವರೆದು, ಗುತ್ತಿಗೆ ಅಥವಾ ಪರವಾನಿಗೆ ಹೊಂದಿರುವವರ ನಿಯಂತ್ರಣ ಮೀರಿದ ಕಾರಣ ಗಳಿಂದಾಗಿ ಕನಿಷ್ಠ ಉತ್ಪಾದನೆ ಮತ್ತು ರವಾನೆ ಪ್ರಮಾಣವನ್ನು ಸಾಧಿಸುವಲ್ಲಿ ವಿಫಲವಾದಲ್ಲಿ- |

| | | |
|---|---|---|
| | | ಸದರಿಯವರು ಅರ್ಜಿ ಸಲ್ಲಿಸಿದ ನಂತರ ಮತ್ತು ವಿಚಾರಣೆಗೆ ಅವಕಾಶ ನೀಡಿದ ನಂತರ, ಸಕ್ಷಮ ಪ್ರಾಧಿಕಾರವು (ಜಿಲ್ಲಾ ಮರಳು ಸಮಿತಿ) ಸೂಕ್ತವೆಂದು ಭಾವಿಸಬಹುದಾದ ಅವಧಿಗೆ ಕನಿಷ್ಠ ಉತ್ಪಾದನೆ ಮತ್ತು ರವಾನೆ ಪ್ರಮಾಣಕ್ಕೆ ಅನುಗುಣವಾಗಿ ರಾಜಧನ ಮತ್ತು ಹೆಚ್ಚುವರಿ ನಿಯತಕಾಲಿಕ ಮೊತ್ತವನ್ನು ಮನ್ನಾ ಮಾಡಲು ಸದರಿ ನಿಯಮದಲ್ಲಿ ಅವಕಾಶ ಕಲ್ಪಿಸಲಾಗಿದೆ.<br>➢ ಮೇಲ್ಕಂಡ ನಿಯಮದಂತೆ, ಹರಾಜು ಮೂಲಕ ಗುತ್ತಿಗೆ ಮಂಜೂರಾದ ಮರಳು ಬ್ಲಾಕ್ ಗಳಿಗೆ ಸಂಬಂಧಿಸಿದಂತೆ ರಾಜಧನ ಮತ್ತು ಹೆಚ್ಚುವರಿ ನಿಯತಕಾಲಿಕ ಮೊತ್ತವನ್ನು ಜಿಲ್ಲಾ ಮರಳು ಸಮಿತಿಯಿಂದ ಮನ್ನಾ ಮಾಡಿರುವ ಪ್ರಕರಣ ಗಳನ್ನು ಹೊರತುಪಡಿಸಿ, ಉಳಿದ ಪ್ರಕರಣಗಳಲ್ಲಿ ನೋಟೀಸ್ ಜಾರಿ ಮಾಡಿ ಬಾಕಿ ಮೊತ್ತವನ್ನು ಪಾವತಿಸಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ. |
| ಇ) | ರಾಯಲ್ಟಿ ಧನವನ್ನು (Royalty) ವಿಧಿಸದೇ ರಾಯಲ್ಟಿ ಮತ್ತು ಎಪಿಪಿ ಸಂಗ್ರಹಣೆಯಲ್ಲಿ 493.90 ಕೋಟಿ ರೂ.ಗಳ ಕೊರತೆಗೆ ಕಾರಣರಾದ ಅಧಿಕಾರಿ / ಸಿಬ್ಬಂದಿ ವಿರುದ್ಧ ಕೈಗೊಂಡಿರುವ ಕ್ರಮಗಳೇನು? | ಕರ್ನಾಟಕ ಉಪಖನಿಜ ತಿದ್ದುಪಡಿ ನಿಯಮಗಳು, 2021 ರ ನಿಯಮ 31-Y(1) ಗೆ ಸಂಬಂಧಿಸಿದಂತೆ ದಿನಾಂಕ 11.09.2023 ರಂದು ಸಕ್ಷಮ ಪ್ರಾಧಿಕಾರಿ ಯನ್ನು ನೇಮಕ ಮಾಡಿ ಆದೇಶ ಹೊರಡಿಸಲಾಗಿದ್ದು, ಅದರಂತೆ ಹರಾಜು ಮೂಲಕ ಗುತ್ತಿಗೆ ಮಂಜೂರಾದ ಮರಳು ಬ್ಲಾಕ್ ಗಳಿಗೆ ಸಂಬಂಧಿಸಿದಂತೆ ರಾಜಧನ ಮತ್ತು ಹೆಚ್ಚುವರಿ ನಿಯತಕಾಲಿಕ ಮೊತ್ತ ಸಂಗ್ರಹಿಸುವ ಸಂಬಂಧ ನಿಯಮಾನುಸಾರ ಕ್ರಮ ವಹಿಸಲಾಗುತ್ತಿದೆ. |

ಸಂಖ್ಯೆ ಸಿಐ-ಎಂಎಂಎನ್/96/2025

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.